ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಾವ ಉಗ್ರಾಣದಲ್ಲೂ ತಂತಿಗಳು ಕಳುವಾಗಿಲ್ಲ. ಆದರೆ ೧೯೮೭ನೇ ಜೂನ್ ತಿಂಗಳಿಂದ ಇಲ್ಲಿಯವರೆಗೆ ಲೈನುಗಳಲ್ಲಿ ತಂತಿ ಕಳುವಾಗಿರುವ ೪ ಪ್ರಕರಣಗಳುಂಟಾಗಿವೆ.

(ಆ) ೪ ಪ್ರಕರಣಗಳಲ್ಲಿ ಕಳುವಾಗಿರುವ ತಂತಿಗಳ ಒಟ್ಟು ಉದ್ದ ೧೧ ಕಿಳ ಕಿ.ಮೀಟರುಗಳು ತಂತಿಯಂ ಒಟ್ಟು ಬೆಲೆ ೩೩,೫೫೦ ರೂ.ಗಳು

(ಇ) ಕಳುವಿನ ಪ್ರತಿ ಪ್ರಕರಣಗಳ ಬಗ್ಗೆ ಮಂಡಳಿಯವರು ಪೋಲೀಸ್ ಇಲಾಖೆಗೆ ದೂರು ನೀಡಲಾಗಿದ್ದು ಅವರಿಂದ ತನಿಖೆ ನಡೆಯುತ್ತಿದೆ. ಮಂಡಳಿಯು ಪೋಲೀಸ್ ಇಲಾಖೆಗೆ ಈ ಬಗ್ಗೆ ಜ್ಞಾಪನಾ ಪತ್ರ ಬರೆಯಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುವುದು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ಉತ್ತರಿಸುವ ಇಪ್ಪತ್ತೇಳನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯು ಮಂದಿಡಲಾಯಿತು.

ಲೈನ್‌ಮನ್‌ರನ್ನು ನೇಮಕ ಮಾಡುವ ಬಗ್ಗೆ

೧೭೯. ಶ್ರೀ ಜಿ. ಎಸ್. ಶಿವಣಂಜಪ್ಪ (ಗುಬ್ಬಿ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ವಿಂಡಿಗೇಶಿ ಮಂಡಲಿಗೆ ಸೇರಿದ ಕಸಾಪುರ, ರೆಡ್ಡಿಹಳ್ಳಿ, ಮಲ್ಲನಾಯಕನ ಹಳ್ಳಿ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯವನ್ನು ಯಾವಾಗ ಪ್ರಾರಂಭಿಸಲಾಯಿತು ?

(ಆ) ವಿದ್ಯುತ್ ಸೌಲಭ್ಯದಲ್ಲಿ ಆಡಚಣೆಗಳು ಏನಾದರೂ ಬಂದರೆ ಈ ಭಾಗಕ್ಕೆ ದುರಸ್ತಿ ಮಾಡಲು ಲೈನ್‌ಮನ್ ನೇಮಕ ಮಾಡಲಾಗಿದೆಯೇ ?

(ಇ) ಸದರಿ ಹಳ್ಳಿಗಳ ರೈತರುಗಳಿಗೆ ಲೈನ್‌ಮನ್‌ಗಳಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳು ಏನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

(ಅ) ಕಸಾಪುರ ಗ್ರಾಮವನ್ನು ೧೫-೧೦-೧೯೭೩ರಲ್ಲೂ ರೆಡ್ಡಿಹಳ್ಳಿ ಗ್ರಾಮವನ್ನು ೨೩-೬-೧೯೭೮ರಲ್ಲೂ ಮಲ್ಲನಾಯಕನ ಹಳ್ಳಿ ೧-೯-೧೯೮೭ರಲ್ಲೂ ವಿದ್ಯುದ್ದೀಕರಣಗೊಳಿಸಲಾಯಿತು.

(ಆ) ಫ್ಯೂಸ್ ಕಂಪ್ಲೆಂಟ್, ಇತರೆ ತೊಂದರೆಗಳ ಬಗ್ಗೆ ಈ ಭಾಗದವರಿಂದ ವಿಡಿಗೇಶಿಗೆ ದೂರುಗಳು ಬಂದ ಕೂಡಲೇ ಅಲ್ಲಿಂದ ಲೈನ್‌ಮೆನ್‌ಗಳನ್ನು ಕಳುಹಿಸಿ ಆದಷ್ಟು ಜಾಗ್ರತೆ ಸರಿಪಡಿಸಲಾಗುತ್ತಿದೆ. ವಿಡಿಗೇಶಿಯ ಶಾಖಾಧಿಕಾರಿಗಳೂ ಕೂಡ ಅವಶ್ಯವಿದ್ದಾಗ ಸಾಧ್ಯವಿದ್ದಾಗಲೆಲ್ಲಾ ಸ್ಥಳಕ್ಕೆ ಭೇಟಿ ನೀಡಿ ಕೆಲಸದ ಮೇಲ್ವಿಚಾರಣೆ ನಡೆಸುತ್ತಾರೆ.

(ಇ) ಸದರಿ ಗ್ರಾಮಗಳ ಗ್ರಾಹಕರಿಂದ ವಿದ್ಯುತ್ ಸೌಲಭ್ಯದ ಆಡಚಣೆ ಬಗ್ಗೆ ದೂರು ಬಂದ ಕೂಡಲೇ ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಪರಿಶೀಲನೆ ನಡೆಸಿ ವ್ಯವಸ್ಥೆ ಅವಶ್ಯಕವೆನಿಸಿದರೆ ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.